<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.</u>

<u>ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 616/2022</u> .

ಫ್ರಾ.ಸಾ.: 1

ಚಾ.ಸಾ.: 1

ಹೆಸರು : ಆದಿಶೇಷ್ ಟಿ ಜಿ
ತಂದೆಯ ಹೆಸರು : ಗೋವಿಂದ ಗೌಡ
ವಯಸ್ಸು : 46 ವರ್ಷ
ಉದ್ಯೋಗ : ಎನ್ ಜಿ ಒ ಅಧ್ಯಕ್ಷರು
ವಿಳಾಸ : ಮೈಸೂರು

... ................................................................................................................. ...

ದಿನಾಂಕ 1 ನೇ ಸೆಪ್ಟೆಂಬರ್ 2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ</u>- <u>ಮಾನ್ಯ ಸ ಸ ಅ ರವರಿಂದ</u> : -

ನಾನು ಮಹಾತ್ಮ ಗಾಂಧಿ ಟ್ರಸ್ಟ್ ನ ಅಧ್ಯಕ್ಷರು ಆಗಿರುತ್ತೇನೆ ಅದರ ಮೂಲ ಕಛೇರಿ ಮೈಸೂರಿನಲ್ಲಿದೆ. ಸದರಿ ಟ್ರಸ್ಟ್ ಮೈಸೂರು, ಕೊಡಗು, ಹಾಸನ, ಚಾಮರಾಜನಗರ, ಮಂಡ್ಯ, ಬೆಂಗಳೂರಿನಲ್ಲಿ ಕಾರ್ಯ ನಿರ್ವಹಿಸುತ್ತದೆ. NABARD NAFINS ಸಂಸ್ಥೆಗಳಿಂದ ಮಹಿಳಾ ಸ್ವಸಹಾಯ ಸಂಘಗಳಿಗೆ ಸಾಲ ಕೊಡಿಸುತ್ತಿದ್ದೆವು. ನಾವು ಮಧ್ಯವರ್ತಿ ರೀತಿ ಕರ್ತವ್ಯ ನಿರ್ವಹಿಸುತ್ತೇವೆ. 2014 ರಿಂದ ವಿರಾಜಪೇಟೆಯ ರೀನಾ ಪ್ರಕಾಶರವರ ಮನೆಯಲ್ಲಿ ನಮ್ಮ ಕಛೇರಿ ಇದೆ. ನಮ್ಮ ಕಛೇರಿಯಲ್ಲಿ ರಾಮಚಂದ್ರ, ಆಸಿಫ್, ರಹೀಮ್, ಕಾವೇರಮ್ಮ,ಆದಿಶ್, ರಜನಿ ಎಂಬ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದರು. NABARD, NAFINS ಸಂಸ್ಥೆಗಳಿಂದ ಸಾಲ ಕೊಡಿಸುವಾಗ ಶೇಕಡಾ 1 ರಷ್ಟು ಕಮಿಷನ್ ನೀಡುತ್ತಿದ್ದರು. ನಮ್ಮ ಸಿಬ್ಬಂದಿ ಸದರಿ ಮಹಿಳಾ ಸ್ವ ಸಹಾಯ ಸಂಘಗಳಿಂದ ಸಾಲ ವಸೂಲಾತಿ ಮಾಡಿ NABARD ನ ಖಾತೆಗೆ ಹಣ ಪಾವತಿಸುತ್ತಿದ್ದರು.

ರಾಜೇಶ್ ಎಂಬುವವರು NAFINS ನಲ್ಲಿ ಮ್ಯಾನೇಜರ್ ಆಗಿದ್ದರು. ಆನಂತರ ಚಾಸಾ 2 ರವರು ಮ್ಯಾನೇಜರ್ ಆಗಿದ್ದರು. ಅವರು ನನಗೆ ದೂರವಾಣಿ ಕರೆ ಮಾಡಿ ನಮ್ಮ ಸಂಸ್ಥೆಯಿಂದ ಸುಮಾರು 19 ಲಕ್ಷ ಹಣ ವಸೂಲಾಗಿದೆ ಆದರೆ ಪಾವತಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಆಗ ನಾನು ಹಣ ನೇರವಾಗಿ ಅವರ

ಖಾತೆಗೆ ಹೋಗುತ್ತದೆ ಎಂದು ತಿಳಿಸಿದ್ದೆ. ಆಗ ಅವರು ನಮ್ಮ ಸಿಬ್ಬಂದಿ ನಗದಾಗಿ ವಸೂಲು ಮಾಡಿದ ಹಣವನ್ನು ನಮ್ಮ ಖಾತೆಗೆ ಹಾಕಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಆಗ ನಾನು, ರಾಮಚಂದ್ರ, ರಹೀಮ್, ಆಸಿಫ್, ಚಾಸಾ 2 , ಪ್ರದೀಪ್ ರವರು ಕೆಲವರ ಮನೆಗೆ ಹೋಗಿ ವಿಚಾರಿಸಿದಾಗ ಕೆಲವರು ನಗದಾಗಿ ಹಣ ನೀಡಿದ್ದರು, ಕೆಲವರು ತಾವಾಗೆ ಖಾತೆಗೆ ಹಣ ವರ್ಗಾಯಿಸಿದ್ದರು. ಆಗ ರಾಮಚಂದ್ರ, ಆಸಿಫ್ , ರಹೀಮ ರವರು ತಾವು ಹಣ ದುರ್ಬಳಕೆ ಮಾಡಿಕೊಂಡಿರುವುದಾಗಿ ತಿಳಿಸಿದರು. ರಾಜೇಶ್ ಸಹ ಬ್ಯಾಂಕ್ ಹಣವನ್ನು ವಸೂಲಿ ಮಾಡಿದ ನಂತರ ಅದನ್ನು ಪಾವತಿಸದೇ ಇತರೆ ಗ್ರಾಹಕರು ತಾವು ನೇರವಾಗಿ ಪಾವತಿಸಿ ನೀಡಿದ ರಶೀದಿಗಳನ್ನು ಮಾತ್ರ ಹಾಜರುಪಡಿಸಿರುತ್ತಾರೆ ಎಂಬುದು ತಿಳಿದು ಬಂದಿರುತ್ತದೆ. ನಾವು ಆ ರೀತಿ ಮನೆ ಮನೆಗಳಿಗೆ ಹೋಗಿ ವಿಚಾರಿಸಿದಾಗ ಸ್ವ ಸಹಾಯ ಸಂಘದವರು ಹಣವನ್ನು ನಮ್ಮ ಸಿಬ್ಬಂದಿಗೆ ಹಾಗೂ ಬ್ಯಾಂಕ್ ಗೆ ಪಾವತಿಸಿರುವುಕ್ಕೆ ರಶೀದಿಗಳನ್ನು ಸಹ ನೀಡಿರುತ್ತಾರೆ. ಹೀಗೆ ನಾವು ಗ್ರಾಹಕರನ್ನು ವಿಚಾರಣೆ ಮಾಡಿದಾಗ ರಾಮಚಂದ್ರ 9 ಲಕ್ಷ, ರಹೀಮ ರವರು 8 ಲಕ್ಷ, ಆಸಿಫ್ 2 ಲಕ್ಷ ಹಣವನ್ನು ದುರ್ಬಳಕೆ ಮಾಡಿಕೊಂಡಿರುವುದು ಕಂಡು ಬಂದಿರುತ್ತದೆ. ಆಗ ರಾಮಚಂದ್ರ ರವರು ಹಣ ಪಾವತಿಸುತ್ತೇನೆ ಕಾಲವಕಾಶ ಬೇಕು ಎಂದು ಕೇಳಿದರು. ಆದರೆ ರಾಮಚಂದ್ರರವರು ಹಣ ಪಾವತಿಸಲಿಲ್ಲ ಹಾಗೂ ಕಟ್ಟಲಾಗುವುದಿಲ್ಲ ಎಂದು ತಿಳಿಸಿದರು. ರಾಮಚಂದ್ರ ಹಾಗೂ ನಮ್ಮ ಸಿಬ್ಬಂದಿ ನಮ್ಮ ಕಛೇರಿಯಲ್ಲಿ ಹಣ ವಸೂಲಾತಿಗಾಗಿ ಇಟ್ಟಿದ್ದ ಪುಸ್ತಕಗಳನ್ನು ತೆಗೆದುಕೊಂಡು ಹೋಗಿರುತ್ತಾರೆ. ರಾಮಚಂದ್ರ ಸ್ವಲ್ಪ ಸಮಯದ ತನಕ ಕರ್ತವ್ಯದಲ್ಲಿ ಇದ್ದು ಆನಂತರ ಕೆಲಸ ಬಿಟ್ಟಿರುತ್ತಾರೆ.

ದಿನಾಂಕ. 13.09.2017 ರಂದು ನಾನು ದೂರು ನೀಡಿರುತ್ತೇನೆ. ಪೊಲೀಸರು ಸ್ವ ಸಹಾಯ ಸಂಘ ನಡೆಯುತ್ತಿದ್ದ ಎಲ್ಲ ಮನೆಗಳಿಗೂ ನಮ್ಮನ್ನು ಕರೆದುಕೊಂಡು ಹೋಗಿರುತ್ತಾರೆ. ನನ್ನ ಸಹಿಯನ್ನು ಪಡೆದಿರುತ್ತಾರೆ.

ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೇಳಲಾಗಿ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿಬೆರಳಚ್ಚು ಮಾಡಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

sd/-

(ಸಾಕ್ಷಿಯವರ ಸಹಿ) ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.